ನೋಟಿಫಿಕೇರ್ಷ.

ತಾರೀಖು 17ನೇ ಡಿಸೆಂಬರ 1895.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಹಾಸನ ಡಿಸ್ಟ್ರಿಕ್ಟ್ ಅರೇಕೆರೆ ತಾಲ್ಲೂಕು ಬಾಣಾವಾರದ ಹೋಬಳಿ ಬೇಚಿರಾಖ ಚಿಕ್ಕ ಬಾಣಾವಾರ ಗ್ರಾಮದಲ್ಲಿ 146 ರೂಪಾಯಿ ಆಕಾರವುಳ್ಳ 196 ಎಕರೆ 32 ಗುಂಟೆ ಜಮೀನನ್ನು ಪೂರಾ ಆಕಾರಕ್ಕೆ ಸಾಗುವಳಿಗೆ ಹರಾಜಿಲ್ಲದೆ ಕೊಡಿಸಬೇಕು ಯಂತ ಬಾಣಾವಾರದಲ್ಲಿರುವ ಜನವಗಲ್ಲು ವೆಂಕಟೇಶಯ್ಯ ದರಖಾಸ್ತು ಮಾಡಿದ್ದಾನೆ.

ಈ ಜಮೀನುಗಳಲ್ಲಿ 540 ದೊಡ್ಡ ಕೆಂದೀ ಮರಗಳು 543 ಈಚಲುಗುಂಬ ಸೊಸಿಗಳು 872 ಈಚಲು ಸಂಣ ಸೊಸಿಗಳು 6 ಇತರ ಜಾತಿ ಮರಗಳು ಇರುವಂತೆಯೂ ಇವುಗಳಿಗೆ ಒಟ್ಟು ರೂ. 522–6—0 ಕಿಮ್ಮತ್ತು ಆಗುವದಾಗಿ ತಿಳಿಯಬರುತ್ತೆ. ಈ ಜಮೀನುಗಳನ್ನು ಮಾಲ್‌ಕಿ ಹರಾಜ್ ಇಲ್ಲದೇನೇ ತನಿಗೆ ಕೊಡಿಸಬೇಕು. ಹಾಗೆ ಕೊಟ್ಟದ್ದೇ ಆದರೆ ಜಮೀನು ಸ್ವಾಧೀನವಾದ ಲಾಗಾಯತು ಬಂದಾ ವರುಷದಲ್ಲಿ (10) ವಕ್ಕಲು ಇರಲು ತಕ್ಕ ಮನೆಗಳನ್ನ ಕಟ್ಟಿ ವಕ್ಕಲನ್ನು ತಂದು ಇಟ್ಟು ಗ್ರಾಮ ಆಬಾದು ಮಾಡುವದಾಗಿಯೂ, ಮೇಲ್ಕಂಡ ವಾಯಿದೆ ಒಳಗೆ ಗ್ರಾಮ ಆಬಾದು ಮಾಡಲು ಖಾತರಿ ಬಗ್ಗೆ ಒಂದನೂರು ರೂಪಾಯಿಗಳನ್ನು ಹಾಜರ್ಮಾಡುವದಾಗಿಯೂ, ವಾಯಿದೆ ಅಂದರ್‌ವಾರ್ ಗ್ರಾಮಕಟ್ಟಿ 10 ವಕ್ಕಲು ತಂದು ಇಡಲು ತಪ್ಪಿದರೆ ಡಿಪಾಜಿಟ್ ಇಡುವ ಸೊಬಲಗನ್ನು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಬಹುದೆಂದು ದರಖಾಸ್ತುದಾರ ಬರ್ಯಾ ಮಾಡುತ್ತಾನೆ. ಈ ದರಖಾಸ್ತುದಾರನ ಸವಾಲಿಗಿಂತ ಸರಕಾರಕ್ಕೆ ಫಾಯಿದೆ ಮತ್ತು ಅನುಕೂಲವಾದ ಸವಾಲ ಮಾಡಿ ಜಮೀನು ಪಡಿಯಲು ಇಚ್ಛೈಯುಳ್ಳವರು ಈ ಇಸ್ತಿಹಾರ ಹುಟ್ಟಿದ ತಾರೀಖು ಲಾಗಾಯತು 3 ತಿಂಗಳೊಳಗೆ ಅರೇಕೆರೆ ತಾಲ್ಲೂಕು ಅಮಲ್ದಾರ್‌ರಲ್ಲಿ ದರಖಾಸ್ತು ಮಾಡಬಹುದು.

ಈ ಮೇರೆ ಹಾಲಿ ಬಂದಿರುವ ದರಖಾಸ್ತಿಗಿಂತ ಅನುಕೂಲವಾದ ಸವಾಲುಗಳು ಮೇಲ್ಕಂಡ 3 ತಿಂಗಳೊಳಗಾಗಿ ಬಾರದೆ ಇದ್ದರೆ ಮೈಸೂರು ಲ್ಯಾಂಡ್ ರೆವಿನ್ಯೂ ರೂಲ್ಸಿನ XXನೇ ರೂಲ್ 18ನೇ ಪ್ಯಾರಾ ಪ್ರಕಾರ ದರಖಾಸ್ತುಗಳು ಅವುಗಳ ಯೋಗ್ಯತಾನುಸಾರವಾಗಿ ಫೈನಲ್ಮಾಡಲ್ಪಡುವವು.

ಎ. ಕೃಷ್ಣಸ್ವಾಮಯ್ಯಂಗಾರ್,
ಡೆಪ್ಯುಟಿ ಕಮ್ಮಿಷನರ್.

ಕಡೂರು ಡಿಸ್ಟ್ರಿಕ್ಟ್.

ಫಾರೆಸ್ಟ್ ಇಲಾಖಾ.

ತಾರೀಖು 6ನೇ ಜನವರಿ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಸ್ಯ 1878ನೇ ಇಸವಿ 8ನೇ ಜೂ ಫಾರೆಸ್ಟ್ ರೂಲ್ಸ್ 13ನೇ ಸೆಕ್ಷನ್ ಅನುಸರಿಸಿ, ಕಡೂರು ಡಿಸ್ಟ್ರಿಕ್ಟ್ ಬಾಬತು ಈ ಕೆಳಗೆ ಕಾಣಿಸಿರುವ ಸ್ಟೇಟ್ ಫಾರೆಸ್ಟ್‌ಗಳು, ಪ್ರೈವೇಟ್‌ಪರ್ಷ್‌ಗಳು, ಮತ್ತು ಸಂದಲ್ ರಿಜರ್ವ್‌ಗಳು ಫಿಕಾರಿ ಬೇಟೆ ಮುಂತಾದವುಗಳಿಗೆ ಅವಕಾಶವಿಲ್ಲದ ರೀತಿ 1896ನೇ ಇಸವಿ ಜನವರಿ 15ರ ಲಾಗಾಯತು ಮೇ ಆಖೈರ್ ವರಿಗೆ ಬಂದ್ ಮಾಡಿ ಬೇಕಿ ವುಸ್ತುವಾರಿ ಬಗ್ಗೆ ಕಾಯಾಡಲ್ಪಡುತ್ತೆ.

ರೂಲ್ಸ್ ಅತಿಕ್ರಮಿಸಿ ಪ್ರವೇಶಿಸುವವರನ್ನ ಕ್ರಮವಾಗಿ ಪ್ರಾಸಿಕ್ಯೂಟ್ ಮಾಡಲ್ಪಡುತ್ತೆ.

ಜಂಜರ್ ನಂ ಬರ್.	ತಾಲ್ಲೂಕು ಹೆಸರು.	ಫಾರೆಸ್ಟ್ ವ ಪ್ರೈವೇಟ್‌ಪರ್ಷ್‌ಗಳ ಹೆಸರು.
1	ತರೀಕೆರೆ ಮತ್ತು ಎಡೆಹಳ್ಳಿ ಸಬ್ ತಾಲ್ಲೂಕು	ಲಕ್ಕವಳ್ಳಿ ಸ್ಟೇಟ್ ಫಾರೆಸ್ಟ್ ಮತ್ತು ಟೀಕ್ ಪ್ರೈವೇಟ್‌ಪರ್ಷ್
2	ಕೊಪ್ಪ	ತೇಗೂರಗುಡ್ಡ ಸ್ಟೇಟ್ ಫಾರೆಸ್ಟ್
3	ಚಿಕ್ಕಮಗಳೂರು	ಬಸವನಕೋಟೆ ಫಾರೆಸ್ಟ್
4	ಡಿಟೋ	ಮುತ್ತೋಡಿ ಸ್ಟೇಟ್ ಫಾರೆಸ್ಟ್
5	ಡಿಟೋ	ಕಳಗಣಿ ಸಂದಲ್ ರಿಜರ್ವ್
6	ಡಿಟೋ	ಮತ್ತಾವರ ಡಿಟೋ
7	ಕೊಪ್ಪ	ಹೆಬ್ಬೆ ಟೀಕ್ ಪ್ರೈವೇಟ್‌ಪರ್ಷ್
8	ಕಡೂರು	ಯಮ್ಮೇದೊಡ್ಡಿ ಸಂದಲ್ ಪ್ರೈವೇಟ್‌ಪರ್ಷ್
9	ತರೀಕೆರೆ	ಶಂಕರಗಟ್ಟ ಸಂದಲ್ ಪ್ರೈವೇಟ್‌ಪರ್ಷ್
10	ಕಡೂರು	ಬುಕ್ಕಸಾಗರ ಪ್ರೈವೇಟ್‌ಪರ್ಷ್
11	ಚಿಕ್ಕಮಗಳೂರು	ಹಂಗಾಜನಹಳ್ಳಿ ಸಂದಲ್ ರಿಜರ್ವ್
12	ಡಿಟೋ	ನೇರಡಿ ಡಿಟೋ
13	ಕೊಪ್ಪ	ಕರಡಿಮಟ್ಟ ರಿಜರ್ವ್ಡ್ ಫಾರೆಸ್ಟ್

ಸಿ. ಇ. ಯಂ. ರಸಲ್,
ಡೆಪ್ಯುಟಿ ಕರ್ಸರ್‌ವೇಟರ್ ಆಫ್ ಫಾರೆಸ್ಟ್ಸ್.